# III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸಿ.ಬಿ.ಐ./ ಕೆ.ಎಲ್.ಎ./ಎ.ಸಿ.ಬಿ. ಪ್ರಕರಣಗಳ ವಿಶೇಷ ನ್ಯಾಯಾಧೀಶರು, ಧಾರವಾಡ

## ಎಸ್.ಸಿ. ಸಂಖ್ಯೆ 24/2025

ಫಿರ್ಯಾದಿದಾರರು : ಕರ್ನಾಟಕ ರಾಜ್ಯದ ಪರವಾಗಿ,
ಪಿ.ಐ., ಕಲಘಟಗಿ ಪೊಲೀಸ್ ಠಾಣೆ.

ವಿರುದ್ಧ

ಆರೋಪಿ 1. ಮೈಲಾರಿ ಪಾಟೀಲ @ ಮೈಲಾರಪ್ಪ ತಂದೆ
ಮಲ್ಲನಗೌಡ, ವಃ 45 ವರ್ಷ,
ವಾಸಃ ಕುರವಿನಕೊಪ್ಪ, ತಾಃ ಕಲಘಟಗಿ.

2. ಬಸಪ್ಪ ಪಾಟೀಲ @ ಬಸವರಾಜ @ ಬಸನಗೌಡ
ತಂದೆ ಮೈಲಾರಿ @ ಮೈಲಾರಪ್ಪ, ವಃ 21 ವರ್ಷ,
ವಾಸಃ ಕುರವಿನಕೊಪ್ಪ, ತಾಃ ಕಲಘಟಗಿ.

## ದೋಷಾರೋಪಣೆ

**ಶ್ರೀಮತಿ ಜರೀನಾ, ಬಿ.ಕಾಂ., ಎಲ್ಎಲ್.ಬಿ(ಸ್ಪೇಷಲ್), III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸಿ.ಬಿ.ಐ./ಎ.ಸಿ.ಬಿ./ಕೆ.ಎಲ್.ಎ. ಪ್ರಕರಣಗಳ ವಿಶೇಷ ನ್ಯಾಯಾಧೀಶರು, ಧಾರವಾಡ,** ಆದ ನಾನು ಆರೋಪಿತರಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದಿಃ 30/12/2024 ರಂದು ಸಾಯಂಕಾಲ 4.00 ಗಂಟೆ ಸುಮಾರಿಗೆ ಕುರುವಿನಕೊಪ್ಪ ಗ್ರಾಮದ ಜಮೀನು ರಿ.ಸ. ನಂ.47 ರಲ್ಲಿ, ಚಾಸಾ.13 ಈರಪ್ಪ @ ಈರಣ್ಣ ಕುರುಬಗಟ್ಟಿರವರ ರಿ.ಸ. ನಂ.41 ನೇ ಜಮೀನಿನಲ್ಲಿ ಹಾಯಿಸಿದ ನೀರು, 1 ಮತ್ತು 2 ನೇ ಆರೋಪಿತರಾದ ನೀವು ಹಾದಾಡಲು ಅಂತ ಬಿಟ್ಟ ದಾರಿಯಲ್ಲಿ ಬಂದು ನಿಂತಿದ್ದರ ವಿಷಯವಾಗಿ 1 ಮತ್ತು 2 ನೇ ಆರೋಪಿತರಾದ ನೀವು ಇಬ್ಬರೂ ಕೂಡಿಕೊಂಡು, ಫಿರ್ಯಾದಿ ಮಂಜುನಾಥ ಪಾಟೀಲ ರವರಿಗೆ 1 ನೇ ಆರೋಪಿಯಾದ ನೀನು ಬಡಿಗೆಯಿಂದ ಹೊಡೆ ಬಡೆ ಮಾಡಿ, ಚಾಸಾ.13 ಈರಪ್ಪ @ ಈರಣ್ಣ ಕುರುಬಗಟ್ಟಿ ಇತನಿಗೆ ಕೊಲೆ ಮಾಡುವ ಉದ್ದೇಶದಿಂದ ಬಡಿಗೆಯಿಂದ ತಲೆಗೆ ಹೊಡೆ ಬಡೆ ಮಾಡಿ ರಕ್ತಗಾಯಪಡಿಸಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಭಾರತೀಯ ನ್ಯಾಯ ಸಂಹಿತಾ ಕಲಂ.109(1) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಜಗಳ ಬಿಡಿಸಿಕೊಳ್ಳಲು ಹೋದ ಫಿರ್ಯಾದಿ ಮಂಜುನಾಥ ಪಾಟೀಲ ರವರ ಹೆಂಡತಿ ಅನಸೂಯಾ ಪಾಟೀಲ ಇವಳಿಗೆ ಕೊಲೆ ಮಾಡುವ ಉದ್ದೇಶದಿಂದ 2 ನೇ ಆರೋಪಿಯಾದ ನೀನು ಬಿಡಸಾಕ ಬರತಿ ಹಾದರಗಿತ್ತಿ ಅಂತಾ ಅವಾಚ್ಯವಾಗಿ ಬೈದು, ಜೀವ ಬೆದರಿಕೆ ಹಾಕಿ ನಿನ್ನ ಹತ್ತಿರ ಇದ್ದ ಚಾಕುವಿನಿಂದ ಎದೆಯ ಎಡಭಾಗಕ್ಕೆ ಹಾಗೂ ಹೊಟ್ಟೆಯ ಎಡಭಾಗಕ್ಕೆ ಚುಚ್ಚಿ

ಭಾರಿಗಾಯಪಡಿಸಿ ಕೊಲೆ ಮಾಡಿದ್ದು, ಭಾರತೀಯ ನ್ಯಾಯ ಸಂಹಿತಾ ಕಲಂ.103(1) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಾದರಗಿತ್ತಿ ಮಕ್ಕಳಾ, ಬೋಸಡಿ ಮಕ್ಕಳಾ ಅಂತ ಅವಾಚ್ಯ ಬೈದಾಡಿದ್ದು, ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜೀವ ಬೆದರಿಕೆ ಹಾಕಿದ್ದು, ಭಾರತೀಯ ನ್ಯಾಯ ಸಂಹಿತಾ ಕಲಂ.351(3) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಇಬ್ಬರೂ ಕೂಡಿಕೊಂಡು ಫಿರ್ಯಾದಿ ಮಂಜುನಾಥ ಪಾಟೀಲ ರವರಿಗೆ 1 ನೇ ಆರೋಪಿಯಾದ ನೀನು ಬಡಿಗೆಯಿಂದ ಹೊಡೆ ಬಡೆ ಮಾಡಿ, ಚಾಸಾ.13 ಈರಪ್ಪ @ ಈರಣ್ಣ ಕುರುಬಗಟ್ಟಿ ಇತನಿಗೆ ಕೊಲೆ ಮಾಡುವ ಉದ್ದೇಶದಿಂದ ಬಡಿಗೆಯಿಂದ ತಲೆಗೆ ಹೊಡೆ ಬಡೆ ಮಾಡಿ ರಕ್ತಗಾಯಪಡಿಸಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು,

ಭಾರತೀಯ ನ್ಯಾಯ ಸಂಹಿತಾ ಕಲಂ.118(1) ಸಹವಾಚಕ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತಿರಿ.

ಈ ಮೇಲಿನ ಆರೋಪಣೆಗಳಿಗೆ ಮೇಲೆ ಹೇಳಿದ ನ್ಯಾಯಾಲಯದಿಂದ ವಿಚಾರಣೆಗೊಳಪಡತಕ್ಕದ್ದು ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

**(ಆರೋಪಣೆಯನ್ನು ಈ ದಿನ ದಿನಾಂಕ 5 ನೇ ಜೂನ 2025 ರಂದು ರಚಿಸಲಾಯಿತು.)**

**ದಿನಾಂಕ:** 05/06/2025

**III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ**
**ಸಿ.ಬಿ.ಐ., ಕೆ.ಎಲ್.ಎ. ಪ್ರಕರಣಗಳ ವಿಶೇಷ**
**ನ್ಯಾಯಾಧೀಶರು, ಧಾರವಾಡ.**

## **III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸಿ.ಬಿ.ಐ./ ಕೆ.ಎಲ್.ಎ./ಎ.ಸಿ.ಬಿ. ಪ್ರಕರಣಗಳ ವಿಶೇಷ ನ್ಯಾಯಾಧೀಶರು, ಧಾರವಾಡ**

## **ಎಸ್.ಸಿ. ಸಂಖ್ಯೆ 24/2025**

**ಫಿರ್ಯಾದಿದಾರರು :** **ಕರ್ನಾಟಕ ರಾಜ್ಯದ ಪರವಾಗಿ,**
**ಪಿ.ಐ., ಕಲಘಟಗಿ ಪೊಲೀಸ್ ಠಾಣೆ.**

**ವಿರುದ್ಧ**

**ಆರೋಪಿ** 1. **ಮೈಲಾರಿ ಪಾಟೀಲ @ ಮೈಲಾರಪ್ಪ ತಂದೆ ಮಲ್ಲನಗೌಡ, ವಃ 45 ವರ್ಷ,**
**ವಾಸಃ ಕುರವಿನಕೊಪ್ಪ, ತಾಃ ಕಲಘಟಗಿ.**

## **ದೋಷಾರೋಪಣೆ**

ಪ್ರಶ್ನೆಃ 1 ಈಗ ಓದಿ ಹೇಳಿ ವಿವರಿಸಿದ ಆರೋಪಣೆಯನ್ನು ಕೇಳಿದೆಯಾ ಮತ್ತು ಅರ್ಥ ಆಗಿದೆಯಾ?

ಉತ್ತರಃ

ಪ್ರಶ್ನೆಃ 2 ಆರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಗೆ ಬಯಸುವಿಯೋ?

ಉತ್ತರಃ

(ಆರೋಪಣೆಯನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯತಾವತ್ತಾಗಿ ಅಭಿಲೇಖಿಸಿಕೊಳ್ಳಲಾಯಿತು.)

ದಿನಾಂಕ: 05/06/2025

III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ
ಸಿ.ಬಿ.ಐ./ಎ.ಸಿ.ಬಿ./ಕೆ.ಎಲ್.ಎ. ಪ್ರಕರಣಗಳ ವಿಶೇಷ
ನ್ಯಾಯಾಧೀಶರು, ಧಾರವಾಡ.

# **III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸಿ.ಬಿ.ಐ./ ಕೆ.ಎಲ್.ಎ./ಎ.ಸಿ.ಬಿ. ಪ್ರಕರಣಗಳ ವಿಶೇಷ ನ್ಯಾಯಾಧೀಶರು, ಧಾರವಾಡ**

## <u>ಎಸ್.ಸಿ. ಸಂಖ್ಯೆ 24/2025</u>

| | | |
|---|---|---|
| **ಫಿರ್ಯಾದಿದಾರರು :** | | **ಕರ್ನಾಟಕ ರಾಜ್ಯದ ಪರವಾಗಿ,<br>ಪಿ.ಐ., ಕಲಘಟಗಿ ಪೊಲೀಸ್ ಠಾಣೆ.** |
| | | **ವಿರುದ್ಧ** |
| **ಆರೋಪಿ** | 2. | **ಬಸಪ್ಪ ಪಾಟೀಲ @ ಬಸವರಾಜ @ ಬಸನಗೌಡ<br>ತಂದೆ ಮೈಲಾರಿ @ ಮೈಲಾರಪ್ಪ, ವಃ 21 ವರ್ಷ,<br>ವಾಸಃ  ಕುರವಿನಕೊಪ್ಪ, ತಾಃ ಕಲಘಟಗಿ.** |

## <u>ದೋಷಾರೋಪಣೆ</u>

ಪ್ರಶ್ನೆ: 1 ಈಗ ಓದಿ ಹೇಳಿ ವಿವರಿಸಿದ ಆರೋಪಣೆಯನ್ನು ಕೇಳಿದೆಯಾ ಮತ್ತು ಅರ್ಥ ಆಗಿದೆಯಾ?

ಉತ್ತರಃ

ಪ್ರಶ್ನೆ: 2 ಆರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಗೆ ಬಯಸುವಿಯೋ?

ಉತ್ತರಃ

(ಆರೋಪಣೆಯನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯತಾವತ್ತಾಗಿ ಅಭಿಲೇಖಿಸಿಕೊಳ್ಳಲಾಯಿತು.)

ದಿನಾಂಕ: 05/06/2025

III ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ
ಸಿ.ಬಿ.ಐ./ಎ.ಸಿ.ಬಿ./ಕೆ.ಎಲ್.ಎ. ಪ್ರಕರಣಗಳ ವಿಶೇಷ
ನ್ಯಾಯಾಧೀಶರು, ಧಾರವಾಡ.